# ಮಾತು-ಕತೆ

ಮೊದಲಿಗೆ ಒಂದು ವಿಚಾರ ಸ್ಪಷ್ಟಪಡಿಸುತ್ತೇನೆ; ಶಂಭಾ ಪರಂಪರೆಯ ಸಂಶೋಧನೆ ಅಂತಾ ಕನ್ನಡದಲ್ಲಿ ಏನಿದೆಯೋ, ಅದು ಹುಟ್ಟುಹಾಕಿರುವ ಗೊಂದಲಗಳನ್ನು ನಿವಾರಿಸುವುದೇ ನನ್ನ ಸಂಶೋಧನೆಯ ಮುಖ್ಯ ಕೆಲಸ. ಶಂ.ಭಾ. ಜೋಶಿಯವರ ಒಟ್ಟು ಸಂಶೋಧನೆಗಳ ಸಾರವನ್ನು ನೀವು ಸೂಕ್ಷ್ಮವಾಗಿ ಪರಿಶೀಲಿಸಿ. ಅವರು 'ಪ್ರಕಾಶ ತತ್ವ' ಎಂದು ಹೇಳುತ್ತಾರೆ, 'ರಸ ತತ್ವ' ಎಂದು ಹೇಳುತ್ತಾರೆ. ಪ್ರಕಾಶ ತತ್ವ ಅಂದರೆ ಅಗ್ನಿ ಸಂಸ್ಕೃತಿ, ರಸ ತತ್ವ ಅಂದರೆ ಜಲ ಸಂಸ್ಕೃತಿ. ಅವರು ಪ್ರಕಾಶ ತತ್ವ ಹಿನ್ನೆಲೆಗೆ ಸರಿದು ರಸ ತತ್ವ ಮುನ್ನೆಲೆಗೆ ಬಂದಿದ್ದರಿಂದ ಭಾರತೀಯ ಸಂಸ್ಕೃತಿ ನೈತಿಕವಾಗಿ ಅಧಃಪತನವಾಯಿತು ಎನ್ನುತ್ತಾರೆ. ವಾಸ್ತವವಾಗಿ ಅದು ಆಗಿರುವುದು ಹಾಗಲ್ಲ; ಜಲ ಸಂಸ್ಕೃತಿಯನ್ನು ಹಿಂದೆ ಸರಿಸಿದ್ದು, ಅಗ್ನಿ ಸಂಸ್ಕೃತಿ ಮುಂದೆ ಬಂದಿದ್ದರಿಂದ ಈ ದೇಶದಲ್ಲಿ ನೈತಿಕ ಅಧಃಪತನವಾಗಿದೆ. ಇಡೀ ಜಗತ್ತಿನ ಎಲ್ಲ ಇಂಡಾಲಜಿಸ್ಟ್‌ಗಳು ಏಕಗ್ರೀವವಾಗಿ ಶಿವ ಮತ್ತು ರುದ್ರ ಬೇರೆ ಅಂತಾರೆ. ಆದರೆ ಶಂ.ಭಾ. ಜೋಶಿ ಅವರ 'ಶಿವ ರಹಸ್ಯ' ಪುಸ್ತಕದಲ್ಲಿ ಹಟ ತೊಟ್ಟವರಂತೆ ಶಿವನ ಮೂಲ ರುದ್ರನೇ ಅಂತಾ ಎಸ್ಟಾಬ್ಲಿಷ್ ಮಾಡುವ ಪ್ರಯತ್ನ ಮಾಡ್ತಾರೆ. ಅದು ಎಷ್ಟು ಕಾಮನ್‌ಸೆನ್ಸ್‌ಗೆ ಹೊಳೆಯುವ ವಿಚಾರ ಅಂದರೆ ಶಿವ ಎನ್ನುವ ನಾಮಪದ ದ್ರಾವಿಡ ಭಾಷಾ ಮೂಲದಿಂದ ಬಂದಿರುವಂಥದ್ದು. ಆದರೆ, ರುದ್ರ ಎನ್ನುವ ನಾಮಪದ ಸಂಸ್ಕೃತ ಭಾಷಾ ಮೂಲದಿಂದ ಬಂದಂಥದ್ದು. ಹೀಗೆ ನಾನ್ ಜೆನೆಟಿಕಲ್ ಗ್ರೂಪ್ಸ್‌ಗೆ ಸೇರಿದ ಎರಡು ಭಾಷೆಗಳ ನಾಮಪದಗಳನ್ನು ಒಂದೇ ದೇವರ ಮೂಲ ಎಂದು ಎಸ್ಟಾಬ್ಲಿಷ್ ಮಾಡಲು ಸಾಧ್ಯವಿಲ್ಲ. ಎರಡನೆಯದು, ಭೌಗೋಳಿಕವಾಗಿ ನೋಡುವುದಾದರೆ, ಶಿವ ಇದ್ದದ್ದು ಇಂಡಿಯಾದಲ್ಲಿ. ರುದ್ರನ ಕಾನ್ಸೆಪ್ಟ್ ಹುಟ್ಟಿದ್ದು ಯುರೇಷಿಯಾದಲ್ಲಿ. ರುದ್ರನ ಪ್ರಾಚೀನ ರೂಪ ಯಾವುದು ಗೊತ್ತಾ? ಯಹ್ವಾ. ಈ ಯಹ್ವಾನೇ ಇವತ್ತು ಜಗತ್ತಿನಾದ್ಯಂತ ಕ್ರೈಸ್ತರು ಮತ್ತು ಯಹೂದಿಗಳು ಆರಾಧನೆ ಮಾಡುತ್ತಿರುವ ಯಹೋವ ಅಥವಾ ಜಹೋವ. ಋಗ್ವೇದದಲ್ಲಿ ನಲವತ್ತೊಂದು ಬಾರಿ ಯಹ್ವಾನನ್ನು ಸ್ಮರಿಸಲಾಗಿದೆ. 'ಯಹ್ವಾ ಇತಿ ಮಹತೋ ನಮಧ್ಯಂ' ಎಂದು ಯಾಸ್ಕನು ಕೂಡ ತನ್ನ 'ನಿರುಕ್ತ'ದಲ್ಲಿ ಉಲ್ಲೇಖಿಸಿದ್ದಾನೆ.

> ನಮ್ಮ ಸುತ್ತಲಿನ ಅನೇಕರ ಕವನಗಳನ್ನು ಓದುತ್ತಿದ್ದ ನನಗೆ ಇದು ಕಾವ್ಯವೇ ಆಗಿಲ್ಲವಲ್ಲ ಎಂದು ಅನಿಸಲಾರಂಭಿಸಿತು. ಹೀಗೆ ಅನೇಕರ ಕಾವ್ಯದ ಬಗ್ಗೆ ನನಗೆ ಅಸಮಾಧಾನವುಂಟಾಗಿ ನಾನೇ ಯಾಕೆ ಕವಿತೆ ಬರೆಯಬಾರದು ಅಂತಾ ಬರೆಯತೊಡಗಿದೆ.

◆ **ಆರ್ಯ–ದ್ರಾವಿಡ ಸಂಸ್ಕೃತಿಗಳ ನಡುವಿನ ಸಂಘರ್ಷವೂ ನಿಮ್ಮ ಮುಖ್ಯ ಹುಡುಕಾಟಗಳಲ್ಲೊಂದು. ನಿಮ್ಮ ಇತ್ತೀಚಿನ 'ಹರಪ್ಪ: ಡಿಎನ್‌ಎ ನುಡಿದ ಸತ್ಯ' ಕೃತಿಯಲ್ಲೂ ನೀವು ಈ ಬಗ್ಗೆ ಬೆಳಕು ಚೆಲ್ಲಿದ್ದೀರಿ.**

ಆರ್ಯ–ದ್ರಾವಿಡ ಎನ್ನುವ ವಿಭಜನೆ ಇರುವುದು ಭಾರತದಲ್ಲಿ ಮಾತ್ರವೇ. ಜಾಗತಿಕ ಮಟ್ಟದಲ್ಲಿ ಹೇಳುವುದಾದರೆ ಅದನ್ನು 'ಕಕೇಷಿಯನ್ ಮೈಗ್ರೇಷನ್ ಥಿಯರಿ' ಎನ್ನುತ್ತಾರೆ. ಶೇಕಡ 99 ಯುರೋಪಿಯನ್ನರು ಕಕೇಷಿಯನ್‌ಗಳು. ಇರಾನ್‌ನಲ್ಲಿದ್ದಂಥ ಪಾರ್ಸಿಗಳು, ಯಹೂದಿಗಳು, ಅರಬ್ಬರು ಮತ್ತು ಯೆಜಿಡಿಗಳು ಕೂಡ ಕಕೇಷಿಯನ್ನರೇ. ಆದರೆ ದಕ್ಷಿಣ ಭಾರತದಲ್ಲಿರುವವರು ಬ್ರಾಹ್ಮಣರಾಗಿದ್ದರೂ ಕೂಡ ಕಾಕಸಾಯಿಡ್ ಅಲ್ಲ. ಇಸ್ಲಾಂ ಧರ್ಮೀಯರಾದರೂ ಕುರ್ದಿಶ್,